

# ಅಪರಂಜಿಗೆ ಮತ್ತೆ ಮತ್ತೆ ಅಗ್ನಿಪರೀಕ್ಷೆ

ಕೆ.ಎಲ್‌. ರಾಹುಲ್ ತಮ್ಮ ಐಪಿಎಲ್ ತಂಡದ ಮಾಲೀಕರು ಕೋಪಾವೇಶದಿಂದ ಮುಗಿಬಿದ್ದಾಗ ಕೈಕಟ್ಟಿ ನಿಂತ ಪ್ರಸಂಗ ಎಂಥವರ ಮನಸ್ಸನ್ನೂ ಕದಡುವಂತಹದ್ದು. ವಿಕೆಟ್ ಕೀಪರ್ ಆಗಿ, ನಾಯಕ ಆಗಿ, ತಮ್ಮ ಸಾಂಪ್ರದಾಯಿಕ ಆಟದ ಸೊಗಸನ್ನು ಈಗಲೂ ನೇವರಿಸುವ ರಾಹುಲ್ 'ಹೊಡಿ–ಬಡಿ' ಕ್ರಿಕೆಟ್‌ನ ಚೌಕಟ್ಟಿಗೆ ಹೊರತಾಗಿಯೂ ಅದರೊಳಗೇ ಏಗುತ್ತಿರುವ ಅಪರೂಪದವರು.

■ ವಿಶಾಖ ಎನ್‌.

ಅವರದ್ದೇನೂ ಶ್ರಮ ಎನ್ನುವುದು ಇಲ್ಲಿ ಇರುವುದಿಲ್ಲ. ನಷ್ಟದ ಪ್ರಶ್ನೆಯೇ ಇಲ್ಲ. ತಂಡವು ಸೋಲಲಿ, ಗೆಲ್ಲಲಿ ₹400 ಕೋಟಿ ವ್ಯಾಪಾರ ಪಕ್ಕಾ. ಇಂತಹವರೆಲ್ಲ ಆಟಗಾರರ ಮೇಲೆ ಮುಗಿಬೀಳುವುದು ಸರಿಯಲ್ಲ. ಡ್ರೆಸಿಂಗ್ ರೂಮ್‌ನಲ್ಲಿ ಸಾಧ್ಯವಾದರೆ ಹುರಿದುಂಬಿಸುವ ಮಾತನ್ನಾಡಬೇಕು. ಅದು ಬಿಟ್ಟು ಏನು ನಡೆಯುತ್ತಿದೆ, ಸಮಸ್ಯೆ ಏನು ಎಂದೆಲ್ಲ ನೇರಾನೇರವಾಗಿ ಮಾಲೀಕರು ಕೇಳಕೂಡದು. ಆಟಗಾರರನ್ನು ಬೇಕಾದರೆ ಬೇರೆ ತಂಡ ಖರೀದಿ ಮಾಡುತ್ತದೆ. ಅದೇ ಅವರನ್ನು ಕಳೆದುಕೊಂಡರೆ ಮಾಲೀಕರಿಗೆ ತಮ್ಮ ತಂಡ ಸೋಲುವುದನ್ನು ನೋಡುವುದರ ಹೊರತು ಬೇರೆ ದಾರಿ ಇಲ್ಲ...

ವೀರೇಂದ್ರ ಸೆಹ್ವಾಗ್ ಈ ರೀತಿ ಮಾತಿನ ಹೊಡೆತ ಪ್ರಯೋಗಿಸಿದ್ದು, ಕೆ.ಎಲ್. ರಾಹುಲ್ ವಿಷಯದಲ್ಲಿ 'ಲಖನೌ ಸೂಪರ್ ಜೈಂಟ್ಸ್' (ಎಲ್‌ಎಸ್‌ಜಿ) ತಂಡದ ಮಾಲೀಕರು ನಡೆದುಕೊಂಡ ರೀತಿಯನ್ನು ಪ್ರಶ್ನಿಸುವಾಗ.

ಎಲ್‌ಎಸ್‌ಜಿ ಮಾಲೀಕ ಸಂಜೀವ್ ಗೋಯೆಂಕಾ ಐಪಿಎಲ್ ಪಂದ್ಯವೊಂದರ ನಂತರ ತಾಳ್ಮೆ ಕಳೆದುಕೊಂಡಿದ್ದರು. ಒಂದೂ ವಿಕೆಟ್ ಕಳೆದುಕೊಳ್ಳದೆ ಹತ್ತೇ ಓವರ್ ಒಳಗೆ ಸನ್‌ರೈಸರ್ಸ್ ಹೈದರಾಬಾದ್ ತಂಡವು ಗುರಿಯನ್ನು ಮುಟ್ಟಿತು. ಅದಾದ ನಂತರ ಕ್ಯಾಮೆರಾ ಕಣ್ಣುಗಳು ಎಲ್ಲಿ ನೆಟ್ಟಿದ್ದವೋ ಅಲ್ಲಿಯೇ ನೇರವಾಗಿ ರಾಹುಲ್ ಮೇಲೆ ಸಂಜೀವ್ ಮುಗಿಬಿದ್ದರು. ಅವರು ಏನು ಮಾತನಾಡಿದರು ಎನ್ನುವುದು ಕೇಳಲಿಲ್ಲವಾದರೂ, ಕ್ರುದ್ಧರಾಗಿದ್ದರೆನ್ನುವುದನ್ನು ಅವರ ಆಂಗಿಕ ಭಾಷೆಯೇ ಹೇಳುತ್ತಿತ್ತು. ಅವರ ಎದುರು ರಾಹುಲ್ ಕೈಕಟ್ಟಿಕೊಂಡು ಶಾಲೆಯಲ್ಲಿ ಶಿಕ್ಷಕರ ಎದುರು ವಿದ್ಯಾರ್ಥಿ ನಿಲ್ಲುವ ರೀತಿಯಲ್ಲಿ ನಿಂತಿದ್ದರು.

ರಾಹುಲ್ ಅವರಂತಹ ಘನತೆ ಮೈಗೂಡಿಸಿಕೊಂಡ ಕ್ರಿಕೆಟಿಗನಿಗೆ ಇದು ದೊಡ್ಡ ಅವಮಾನ ಎಂದೇ ಕ್ರಿಕೆಟ್ ಸೂಕ್ಷ್ಮ ಅರಿತ ಅನೇಕರು ಪ್ರಕರಣವನ್ನು ವಿಶ್ಲೇಷಿಸಿದರು. ರಾಹುಲ್ ಪತ್ನಿ ಅತಿಯಾ ಶೆಟ್ಟಿ ಈ ವಿಷಯವಾಗಿ ಸಂಜೀವ್ ಗೋಯೆಂಕಾ ಅವರನ್ನು ಪ್ರಶ್ನಿಸಿದ್ದು, ಸಂಜೀವ್ ತಮ್ಮ ಮನೆಯಲ್ಲಿ ರಾಹುಲ್‌ಗೆ ಸನ್ಮಾನ ಮಾಡಿದರು ಎಂದೆಲ್ಲ ಗುಲ್ಲು ಹಬ್ಬಿತು. ಇದರ ಸತ್ಯಾಸತ್ಯತೆಯ ಕುರಿತು ರಾಹುಲ್ ತುಟಿ ಬಿಚ್ಚಲಿಲ್ಲ.

ರಾಹುಲ್ ಈ ಸಲ ಟ್ವೆಂಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಡಲಿರುವ ತಂಡಕ್ಕೂ ಆಯ್ಕೆಯಾಗಿಲ್ಲ. ಹಾಗಂತ ಅವರ ವೈಯಕ್ತಿಕ ಆಟವೇನೂ ತೀರಾ ಕಳಪೆಯಾಗಿಲ್ಲ. ಈ ಸಲ ಐಪಿಎಲ್‌ನಲ್ಲಿ ಅವರ ಸ್ಟ್ರೈಕ್ ರೇಟ್ 139–140ರ ಆಸುಪಾಸಿನಲ್ಲಿದೆ. ಕೆಲವೇ ವರ್ಷಗಳ ಹಿಂದೆ ಇದನ್ನು ಉತ್ತಮ ಸ್ಟ್ರೈಕ್ ರೇಟ್ ಎನ್ನಲಾಗುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಈ